

ಸ. ರಘುನಾಥ ಅವರೊಂದಿಗೆ ಸಂದರ್ಶಕ ಚೀಮನಹಳ್ಳಿ ರಮೇಶಬಾಬು

ಹೋಗಿ ವೇಶ್ಯೆಯೊಬ್ಬಳಿಗೆ ನೀನು ಇದನ್ನೆಲ್ಲ ಬಿಡಬಹುದಲ್ಲ ಅಂತ ಕೇಳ್ತಾನೆ. ಆಗ ಅವಳು ಹೇಳ್ತಾಳೆ, 'ನಾನು ಬಿಟ್ಟುಬಿಡ್ತೀನಿ ನೀನು ನನ್ನ ಮದುವೆ ಆಗ್ತೀಯಾ' ಅಂತ. ಅಂದ್ರೆ ಅವಾಗ ಅವನ ಉಪದೇಶ ಕುಸಿದು ಬಿದ್ದೋಗುತ್ತೆ. ಮಾತಾಡ್ದೆ ಅಲ್ಲಿಂದ ಹೊರಟು ಹೋಗ್ತಾನೆ. ಅಂದರೆ ತತ್ವ ಅಥವಾ ಉಪದೇಶಿಸೋದು ಬಹಳ ಸುಲಭ. ಪಾಲಿಸುವ ವಿಷಯಕ್ಕೆ ಬಂದಾಗ ಪಲಾಯನವಾದಿಗಳೇ ಆಗಿರ್ತೇವೆ ಅಂತ. ಹೀಗೆ ಸಾಮಾಜಿಕ ಪರಿವರ್ತನೆ ಅನ್ನೋದು ಭಾಷಣಗಳಲ್ಲಿ ಅಥವ ನಾವು ಕಟ್ಟಿಕೊಳ್ಳುವ ಆದರ್ಶದ ಸಿದ್ಧಾಂತಗಳಲ್ಲಿ ಇರುವುದಿಲ್ಲ. ಈ ತರಹದ ಸಾಮಾಜಿಕ ಸುಧಾರಣೆ. ಹಾಗೆ ನೋಡಿದರೆ ಮಾಸ್ತಿ ಕಥೆಗಳಲ್ಲಿ 'ಮೊಸರಿನ ಮಂಗಮ್ಮ' ಕಥೆ ಒಂದು ರೀತಿಯ ಶಿಕ್ಷಣವೆ. ಗುರಜಾಡರ 'ಮೆಟಿಲ್ಡಾ' ಅನ್ನೋ ಕಥೇಲಿ ಬರುವಂತಾದ್ದು ಅದೇನೆ. ಆಮೇಲೆ ಇಬ್ಬರೂ ಸಂಬೋಧನೆಗಳನ್ನು ಅತ್ಯಂತ ಸಭ್ಯತೆಯಿಂದ ತರ್ತಾರೆ. ಬಹುವಚನದ ಪ್ರಯೋಗ ಇದೆ. ಹಾಗಾಗಿ ಇವರಿಬ್ಬರೂ ಕೂಡ ಕೃಷ್ಣದೇವರಾಯನ ಪರಂಪರೆಯನ್ನೇ ಮುಂದುವರೆಸುತ್ತಾರೆ.

ಮತ್ತೆ ವೇಗುಂಟ ಮೋಹನಪ್ರಸಾದ್‌ಗೆ ಎ.ಕೆ. ರಾಮಾನುಜನ್ ಮೆಚ್ಚಿನ ಕವಿ ಆಗಿದ್ರು. ನಿಸಾರರನ್ನು ತೆಲುಗಿಗೆ ತಗೊಂಡು ಹೋಗ್ಬೇಕಾದ್ರೆ ನನಗೆ ಯಾರಿದ್ರು? ಕೆ. ಶಿವಾರೆಡ್ಡಿ ಅಂತಹವರು ನನಗೆ ಕಂಡ್ರು. ಆಧುನಿಕ ಕನ್ನಡ ಕವಿತಲು ಅಂತ ಮಾಡ್ಬೇಕಾದ್ರೆ ಜಿ.ಪಿ. ರಾಜರತ್ನಂರ ಆಯ್ದ 'ರತ್ನನ ಪದ'ಗಳನ್ನು ತೆಗೆದುಕೋ ಬೇಕಾದ್ರೆ ನನಗೆ ನಂಡೂರಿ ಸುಬ್ಬಾರಾವ್ ಅವರ 'ಎಂಕಿ ಪಾಟಲು' ಮಾದರಿಯಾಗಿ ಕಾಣ್ತು. ಅಂದರೆ ಒಂದು ಒಳ್ಳೆಯದು ಇನ್ನೊಂದು ಭಾಷೆಗೆ ಹೋಗ್ಬೇಕಾದಾಗ, ಎರಡೂ ಭಾಷೆಯ ಒಂದು ಒಳ್ಳೆಯ ಮಾದರಿ ನಮಗೆ ಸಿಗಬೇಕಾಗುತ್ತೆ. ನಿಮ್ಮ ಈ ಮೊದಲಿನ ಪ್ರಶ್ನೆಗೆ ಅನ್ವಯಿಸುವ ರೀತೀಲಿ ಮತ್ತೊಮ್ಮೆ ಹೇಳೋದಾದರೆ, ಭಾರತೀಯ ಸಾಹಿತ್ಯ ಸಾಗರಕ್ಕೆ ಈ ಎರಡೂ ಭಾಷೆಯ ನದಿಗಳು ಒಂದು ಕಡೆ ಸಂಗಮಿಸಿ ಸೇರುತ್ತವೆ. ಆ ಗುಣ ಇವು ಹೊಂದಿರೋದ್ರಿಂದ ಇವುಗಳ ನಡುವೆ ವಿವಾದ ಇಲ್ಲ. ನನ್ನಂತಹವನಿಗೆ ಸುಲಭವಾದ ಮಾರ್ಗ ಇದು.

ಇಬ್ಬರು ಧ್ವನಿ ಸರಸ್ವತಿಗಳು ನನ್ನ ಒಳಗಡೆ ಮಾತಾಡಕ್ಕೆ ಶುರುಮಾಡಿದಾಗ ಯಾವುದಾದರೂ ಒಂದು ಭಾಷೆಯಾಗಿ ರೂಪಾಂತರಗೊಳ್ಳುತ್ತೆ. ಇದನ್ನ ನೀವು ಮೂಢನಂಬಿಕೆ ಅನ್ನಬಹುದು ಅಥವಾ ಮತ್ತಿನ್ನೇನಾದರು ಅನ್ನಬಹುದು. ಯಾಕೆ ಅಂದ್ರೆ ನಾವು ಎಲ್ಲಾದಕ್ಕೂ ಸ್ವತಂತ್ರರಿದ್ದೇವೆ. ಆದರೆ ಧ್ವನಿದೇವತೆ ಅನ್ನೋಳು ಒಬ್ಬಳಿದ್ದಾಳೆ. ನಾನು ದೇವತೆ ಅನ್ನಬಹುದು, ಇನ್ನೊಬ್ಬರು ಮತ್ತೊಂದು ಹೇಳಬಹುದು. ಎರಡು ಧ್ವನಿದೇವತೆಗಳು ಏಕದೇಹಿ ಆಗುವುದಿದೆಯಲ್ಲ ಅದೇ ಅನುವಾದ.

◆ ನಿಸಾರರನ್ನು ದಾಟಿಸಿದ ಹಾಗೆ ಮಾಸ್ತಿಯನ್ನು